**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

**ಸಂಖ್ಯೆ:** ತಾಂ.ಶಿ.ನಿ 9 ಸಿ.ಡಿ.ಸಿ 2022 (ಕ.ಸಂ.967321)

**ಆಯುಕ್ತರ ಕಛೇರಿ**
**ತಾಂತ್ರಿಕ ಶಿಕ್ಷಣ ಭವನ,**
**ಅರಮನೆ ರಸ್ತೆ, ಬೆಂಗಳೂರು-1**
**ದಿನಾಂಕ: 23.12.2022**

## ಜ್ಞಾಪನ

**ವಿಷಯ:** ದಿನಾಂಕ: 25.12.2022 ರಂದು ಬೆಳಿಗ್ಗೆ 11.00 ಗಂಟೆಗೆ ಕಂಠೀರವ ಒಳಾಂಗಣ ಕ್ರೀಡಾಂಗಣ ಬೆಂಗಳೂರು ಇಲ್ಲಿ ರಾಜ್ಯ ಸರ್ಕಾರದ ವತಿಯಿಂದ ನಡೆಯುವ "**ಸುಶಾಸನ ದಿವಸ-2022**" ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗದವರು ಹಾಜರಾಗುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರದ ವತಿಯಿಂದ ರಾಜ್ಯ ಮಟ್ಟದಲ್ಲಿ ಸುಶಾಸನ ಮಾಸ-2022 ಆಚರಣೆಯು ದಿನಾಂಕ: 25.12.2022ರ ಬೆಳಿಗ್ಗೆ 11.00 ಗಂಟೆಗೆ **ಕಂಠೀರವ ಒಳಾಂಗಣ ಕ್ರೀಡಾಂಗಣ ಬೆಂಗಳೂರು** ಇಲ್ಲಿ ಆಯೋಜಿಸಿಸಲಾಗಿದೆ.

ಸದರಿ ಕಾರ್ಯಕ್ರಮದಲ್ಲಿ ಕೆಳಕಂಡ ಸಂಸ್ಥೆಗಳ ಪ್ರಾಚಾರ್ಯರು ತಮ್ಮ ಸಂಸ್ಥೆಯ ಎದುರು ನಮೂದಿಸಿರುವ ಸಂಖ್ಯೆವಾರು ವಿದ್ಯಾರ್ಥಿಗಳನ್ನು ಹಾಗೂ ಬೋಧಕರುಗಳನ್ನು ಕಾರ್ಯಕ್ರಮಕ್ಕೆ ಕೋವಿಡ್ ನಿಯಮಾವಳಿಗಳ ಪ್ರಕಾರ ಮಾಸ್ಕ್ ಧರಿಸಿ ಕಡ್ಡಾಯವಾಗಿ ಹಾಜರಾಗಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಆಯುಕ್ತರ ನಿರ್ದೇಶನದಂತೆ ಸೂಚಿಸಿದೆ. ಸಂಸ್ಥೆಯ ಪ್ರಾಚಾರ್ಯರು ತಮ್ಮ ಸಂಸ್ಥೆಯಿಂದ 50 ವಿದ್ಯಾರ್ಥಿಗಳಿಗೆ ಓರ್ವ ಉಪನ್ಯಾಸಕರನ್ನು ಶಿಸ್ತುಪಾಲನೆಗೆ ನೇಮಿಸಿ, ಸದರಿ ವಿದ್ಯಾರ್ಥಿಗಳು ಮತ್ತು ಬೋಧಕರ ಪಟ್ಟಿಯನ್ನು ಜಂಟಿ ನಿರ್ದೇಶಕರು-ಸಿಡಿಸಿ ಇವರಿಗೆ jointdirector.cdc@gmail.com ಇಮೇಲ್ ಮುಖಾಂತರ ಸಲ್ಲಿಸಲು ಸೂಚಿಸಲಾಗಿದೆ.

| ಕ್ರ. ಸಂ. | ಸಂಸ್ಥೆ | ಕಾರ್ಯಕ್ರಮಕ್ಕೆ ಹಾಜರಾಗಬೇಕಾದ ಸಂಖ್ಯೆ | |
|---|---|---|---|
| | | ವಿದ್ಯಾರ್ಥಿಗಳು | ಬೋಧಕರು |
| 1 | ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್ ಬೆಂಗಳೂರು | 500 | 10 |
| 2 | ಎಸ್.ಕೆ.ಎಸ್.ಜೆ.ಟಿ.ಐ ಬೆಂಗಳೂರು. | 200 | 4 |
| 3 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು. | 300 | 6 |
| 4 | ಜಿ.ಆರ್. ಐ.ಸಿ.ಪಿ ಬೆಂಗಳೂರು. | 100 | 4 |
| 5 | ಸರ್ಕಾರಿ ಪಾಲಿಟೆಕ್ನಿಕ್, ಇಮ್ಮಡಿಹಳ್ಳಿ | 100 | 4 |
| 6 | ಸರ್ಕಾರಿ ಪಾಲಿಟೆಕ್ನಿಕ್, ಚನ್ನಸಂದ್ರ | 100 | 4 |
| 7 | ಸರ್ಕಾರಿ ಜವಳಿ ಸಂಸ್ಥೆ, ಬೆಂಗಳೂರು. | 50 | 1 |
| 8 | ಸರ್ಕಾರಿ ಮುದ್ರಣ ಸಂಸ್ಥೆ, ಬೆಂಗಳೂರು. | 50 | 1 |

23/12/2022

**ನಿರ್ದೇಶಕರು**

**ಇವರಿಗೆ:**
ಮೇಲ್ಕಂಡ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ: - ಸೂಕ್ತ ಕ್ರಮಕ್ಕಾಗಿ.

ಪ್ರತಿ:
1. ಮಾನ್ಯ ಆಯುಕ್ತರ ಆಪ್ತ ಕಚೇರಿ- ಮಾಹಿತಿಗಾಗಿ.
2. ಮಾನ್ಯ ನಿರ್ದೇಶಕರ ಆಪ್ತ ಕಚೇರಿ- ಮಾಹಿತಿಗಾಗಿ.